O.S. No. 317/16 DW.1 Dated 22-07-2019

ದಿಃ 22-07-2019 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು ಶ್ರೀ ಟಿ ಎಂ ವಕೀಲರಿಂದಃ ವಾದಿ ಪರವಾಗಿ

1. ವಾದಿಯ ಸರ್ವೆ ನಂ. 142 ರ ಬಗ್ಗೆ ಈ ದಾವೆಯನ್ನು ಹೂಡಿದ್ದಾರೆ. ಆದರೆ ಎಷ್ಟು ವಿಸ್ತೀರ್ಣದ ಜಮೀನಿನ ಬಗ್ಗೆ ದಾವೆ ಹೂಡಿದ್ದಾರೆ ನನಗೆ ಗೊತ್ತಿಲ್ಲ. ಈ ಪ್ರಕರಣದಲ್ಲಿ ಪ್ರತಿವಾದ ಪತ್ರ ಸಲ್ಲಿಸಲು ನಾನೇ ಮಾಹಿತಿ ಕೊಟ್ಟಿರುತ್ತೇನೆ ದಾವಾ ಜಮೀನಿನ ಬಗೆಗಿನ ದಾಖಲೆಗಳನ್ನು ಓದಿ ತಿಳಿದುಕೊಂಡಿದ್ದೇನೆ. ಸರ್ವೆ ನಂ. 142 ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣದ ಜಮೀನಿದೆ ನನಗೆ ಗೊತ್ತಿಲ್ಲ. ಆದರೆ ನಮ್ಮ ಜಮೀನು 1 ಎಕರೆ 19 ಗುಂಟೆ ಇದೆ. ದಾವಾಸ್ತಿಗೆ ಹಿಂದೆ ಯಾವ ನಂಬರ್ ಇತ್ತೆಂದು ನನಗೆ ಗೊತ್ತಿಲ್ಲ. ನಮ್ಮ ಲಿಖಿತ ತಕರಾರಿನಲ್ಲಿ ಸರ್ವೆ ನಂ. 142 ರ ಜಮೀನು ಹಿಂದೆ ಪಿ ಆರ್ ನಂ. 20 ಎಂದು ಇತ್ತು ಎಂದು ನಮೂದಿಸಿದ್ದೇವೆ ಎಂದರೆ ನನಗೆ ಗೊತ್ತಿಲ್ಲ. ದಾವಾಸ್ತಿಯನ್ನು ಚನ್ನಮ್ಮ ಕೋಂ ಕುಳ್ಳೇಗೌಡರವರಿಂದ ನನ್ನ ತಂದೆ ಖರೀದಿಸಿದ್ದಾರೆ. 1969 ನೇ ಇಸವಿಯಲ್ಲಿ ದಾವಾಸ್ತಿಯನ್ನು ಕೊಂಡುಕೊಂಡಿದ್ದಾರೆ. ಈಗ ನನಗೆ ತೋರಿಸುತ್ತಿರುವ ನಿಡಿ-2 ದಾಖಲೆ ನಮ್ಮ ಜಮೀನಿನ ಕ್ರಯಪತ್ರವಾಗಿದೆ. ಸದರಿ ದಾಖಲೆಯಲ್ಲಿ ಪಿ ಆರ್ ನಂ. ದಾಖಲಾಗಿಲ್ಲವೆಂದರೆ ನನಗೆ ಗೊತ್ತಿಲ್ಲ. ದಿ18-05-1968 ರಂದು ಪ್ರಕರಣ ಸಂಖ್ಯೆ 390/66-67 ರಂತೆ ಕುಳ್ಳೇಗೌಡರಿಗೆ ಸರ್ವೆ ನಂ 142/2 ರಲ್ಲಿ 1 ಎಕರೆ 19 ಗುಂಟೆ ಜಮೀನು ಮಂಜೂರಾಗಿದೆ ಎಂದರೆ ನನಗೆ ಗೊತ್ತಿಲ್ಲ.

2. ಕುಳ್ಳೇಗೌಡರು ಪಿ ಆರ್ ನಂ. 33 ಮತ್ತು 34 ಜಮೀನುಗಳಿಗೆ ಸಂಬಂಧಿಸಿದಂತೆ ತನ್ನನ್ನು ಗೇಣಿದಾರರನ್ನಾಗಿ ಘೋಷಿಸಬೇಕೆಂದು ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಮೇಲಿನ ಜಮೀನಿನಲ್ಲಿ ಒಟ್ಟು 3 ಎಕರೆ 19 ಗುಂಟೆ ಇದ್ದು ಸರ್ವೆ ನಂ. 142 ಅದೇ ಜಮೀನಿನಲ್ಲಿ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾಸ್ತಿಯನ್ನು ಕುಳ್ಳೇಗೌಡ ವಾದಿಯ ತಂದೆ ಮಾಳಿಗೇಗೌಡರವರು ತಮ್ಮೊಳಗೆ ಹಂಚಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾಸ್ತಿಯನ್ನು ನಾವು ಪ್ರತಿವಾದಿಯರು ಪಾಲುವಿಭಾಗ ಮಾಡಿಕೊಂಡಿರುತ್ತೇವೆ. ವಾದಿಯರ ಕುಟುಂಬಕ್ಕೂ ನಮಗೂ ಯಾವುದೇ ಸಂಬಂಧವಿಲ್ಲ. ನಿಪಿ-6 ರಂತೆ ನಾವು ಪ್ರತಿವಾದಿಯರು ಕುಳ್ಳೇಗೌಡರ ಮಕ್ಕಳೆಂದು ಕಾಣಿಸಿ ದಾವಾಸ್ತಿಯ ಖಾತೆಯನ್ನು ನಮ್ಮ ಹೆಸರಿಗೆ ಬದಲಾಯಿಸಿಕೊಂಡಿದ್ದೇವೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಜಮೀನಿನಿನ ಪೂ-ಕುಳ್ಳೇಗೌಡರ ಉಳಿಕೆ ಜಮೀನು, ಪ-ತಿಮ್ಮೇಗೌಡರ ಗದ್ದೆ, ದ-ಹೊಳೆ, ಉ-ಕುಳ್ಳೇಗೌಡರ ಉಳಿಕೆ ಜಮೀನು. ದಾವಾಸ್ತಿಯ ಹಾಗೂ ಸುತ್ತಮುತ್ತಲಿನ ಗದ್ದೆಗಳನ್ನು ಕಾರೇಕಡುವಿನ ಗದ್ದೆ ಎನ್ನುತ್ತಾರೆ ಎಂದರೆ ಸರಿ. ವಾದಿಗಳು ದಾವಾಸ್ತಿಯಲ್ಲಿ 34 ಗುಂಟೆ ಜಮೀನಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

3. ನಾವು ವಿಭಾಗವನ್ನು ಬರವಣಿಗೆಯಲ್ಲಿ ಮಾಡಿಕೊಂಡಿದ್ದೇವೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ದಾವಾಸ್ತಿಗಳ ಪಿ ಆರ್ ನಂ. 20 ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಬಹುದಾ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಪಿ ಆರ್ ನಂ. 20 ಎಂಬ ನಂಬರಿನ ಯಾವುದೇ ಜಮೀನು ಅಸ್ತಿತ್ವದಲ್ಲಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ 34 ಗುಂಟೆ ವಾದಿಯರಿಗೆ ಹಿಸ್ಸಾದಲ್ಲಿ ಬಂದಿದೆ ಎಂದರೆ ಸರಿಯಲ್ಲ. ನಮ್ಮ ಜಮೀನು ಎಲ್ಲಿದೆ ಎಂದು ನನಗೆ ಗೊತ್ತಿಲ್ಲವೆಂದರೆ ಸರಿಯಲ್ಲ. ಸುಳ್ಳು ಮಾಹಿತಿಯನ್ನು ನೀಡಿ ವಾದಿಯರಿಗೆ ಸೇರಿದ ದಾವಾಸ್ತಿಗಳ ಖಾತೆಯನ್ನು ನಮ್ಮ ಹೆಸರಿಗೆ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾವಾಸ್ತಿಗೂ ನಮಗೂ ಯಾವುದೇ ಸಂಬಂಧವಿಲ್ಲವೆಂದರೆ ಸರಿಯಲ್ಲ. ದಾವಾಸ್ತಿ ಕುಳ್ಳೇಗೌಡರಿಗೆ ಮಂಜೂರಾದ ಜಮೀನು ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

O.S. No. 317/16 DW.1 Dated 22-07-2019

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್, ಆಲೂರು